


International Journal of Kannada Research
www.kannadajournal.com

ISSN: 2454–5813
IJKR 2018; 4(4): 162-165
© 2018 IJKR
www.kannadajournal.com
Received: 18-08-2018
Accepted: 25-09-2018

**ಡಾ.ಸಿ.ಕೆ.ಕೊಟ್ರಪ್ಪ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ದಾವಣಗೆರೆ, ಕರ್ನಾಟಕ, ಭಾರತ

**Correspondence**
**ಡಾ.ಸಿ.ಕೆ.ಕೊಟ್ರಪ್ಪ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ದಾವಣಗೆರೆ, ಕರ್ನಾಟಕ, ಭಾರತ

# ಚಿತ್ರದುರ್ಗ ಜಿಲ್ಲೆಯಲ್ಲಿ ಶ್ರೀ ವೈಷ್ಣವ ಆಳ್ವಾರರು

**ಡಾ.ಸಿ.ಕೆ.ಕೊಟ್ರಪ್ಪ**

**DOI:** https://doi.org/10.22271/24545813.2018.v4.i4c.939

ಪ್ರಾಚೀನ ಭಾರತದ ಇತಿಹಾಸವನ್ನು ಅವಲೋಕಿಸಿದರೆ, ಅನೇಕ ಧಾರ್ಮಿಕ ಮಹಾಪುರುಷರು, ಸಾಧು–ಸಂತರು, ಯೋಗಿಗಳು ಅವತರಿಸಿರುವುದು ಕಂಡುಬರುತ್ತದೆ. ಇವರು ತತ್ತ್ವೋಪದೇಶಗಳಿಂದ ಪ್ರಭಾವಿತಗೊಂಡ ಪ್ರಾಚೀನ ಭಾರತೀಯ ಸಮಾಜವು ಧಾರ್ಮಿಕ ಐಕ್ಯತೆಯ ನೆಲೆವೀಡಾಗಿ ದ್ದಿತು. ಈ ಹಿನ್ನೆಲೆಯಲ್ಲಿ ಕ್ರಿ.ಶ. ನಾಲ್ಕನೇ ಶತಮಾನದಿಂದ ಕ್ರಿ.ಶ. 10–11ನೇ ಶತಮಾನದ ಅವಧಿಯಲ್ಲಿ ಜೀವಿಸಿದ್ದ ಶ್ರೀ ವೈಷ್ಣವ ಆಳ್ವಾರರುಗಳನ್ನು ಹಾಗೂ ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಕಂಡುಬರುವ ಅವರ ಶಿಲ್ಪಗಳನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಸಾಂಪ್ರದಾಯಿಕವಾಗಿ ಹೇಳುವುದಾದರೆ ವೈಷ್ಣವ ಆಳ್ವಾರರು ಹನ್ನೆರಡು ಮಂದಿ, ವೇದ–ವೇದಾಂತಗಳಿಂದ ಪ್ರಭಾವಿತರಾದ ಇವರು ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ಪಾಂಡ್ಯ, ಚೋಳ, ಪಲ್ಲವ ಸಾಮ್ರಾಜ್ಯಗಳಲ್ಲಿ ಸಂಚರಿಸಿ, ವೈಷ್ಣವ ಧರ್ಮವನ್ನು ಪ್ರಚುರಪಡಿಸಿದ ಭಗವದ್ಭಕ್ತರು. ಇವರ ಜೀವಿತದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಅವರಲ್ಲಿ ಕೆಲವರು, ಇವರ ಕಾಲಾವಧಿಯು ಕ್ರಿ.ಶ. ನಾಲ್ಕನೇ ಶತಮಾನದಿಂದ 8ನೇ ಶತಮಾನದವರೆಗೆ ಎಂದೂ ಮತ್ತೆ ಕೆಲವರು ಕ್ರಿ.ಶ. 7ನೇ ಶತಮಾನದಿಂದ 10–11ನೇ ಶತಮಾನದ ಆದಿಭಾಗದವರೆಗೆ ಎಂದೂ ಅಭಿಪ್ರಾಯ ಪಡುತ್ತಾರೆ. ಈ ರೀತಿ ಭಿನ್ನಾಭಿಪ್ರಾಯಗಳಿಂದ ವ್ಯಕ್ತಪಡುವ ಹನ್ನೆರಡು ಮಂಡಿ ಆಳ್ವಾರರು ಏಕಕಾಲದಲ್ಲಿ ಜೀವಿಸಿರಲಿಲ್ಲ. ಹಾಗಾಗಿ ಇವರನ್ನು ಮೂರು ಪಂಗಡಗಳಾಗಿ ವಿಂಗಡಿಸ ಲಾಗಿದೆ. ಮೊದಲನೆಯ ಪಂಗಡದಲ್ಲಿ ಪೊಗೈ ಪೊದಾತ್ತಾಳ್ವಾರ್, ಪೇಯಾಳ್ವಾರ್ ಮತ್ತು ತಿರುಮಳ ಆಳ್ವಾರ್‌ರವರನ್ನು ಎರಡನೇ ಪಂಗಡದಲ್ಲಿ ನಮ್ಮೊಳ್ವಾ, ಮಧುರಕವಿ ಆಳ್ವಾ, ಕುಲಶೇಖರ ಆಳ್ವಾರ್, ಪೆರಿಯಾಳ್ವಾರ್ ಮತ್ತು ಆಂಡಾಳರವರು ಹಾಗೂ ಮೂರನೇ ಪಂಗಡದಲ್ಲಿ ತೊಂಡರಪೋಡಿ ಆಳ್ವಾರ್, ತಿರುಪ್ಪಾಣಾಳ್ವಾರ್ ಮತ್ತು ತಿರುಮಂಗೈ ಆಳ್ವಾರ್‌ರವರನ್ನು ನೋಡುತ್ತೇವೆ. ಇವರಲ್ಲಿ

ನಿಮ್ನ ವರ್ಗದವರಾದ ತಿರುಪ್ಪಾಣಾಳ್ವಾರರು, ಕಳ್ಳರಜಾತಿಗೆ ಸೇರಿದ ತಿರುಮಂಗೈ ಆಳ್ವಾರರು, ಹೀನಕುಲದ ಸ್ತ್ರೀ ಅಂಡಾಳ್‌ರಿರುವುದನ್ನು ಗಮನಿಸಿದರೆ ಇವರುಗಳು ಯಾವುದೆ ಒಂದು ಜಾತಿ ಅಥವಾ ವರ್ಗಕ್ಕೆ ಸೇರಿರದೆ, ಭಿನ್ನಜಾತಿ ಹಾಗೂ ವರ್ಗದಿಂದ ಬಂದವರೆಂದು ಹೇಳಬಹುದು.

ಕ್ರಿ.ಶ.11ನೇ ಶತಮಾನದ ಆದಿ ಭಾಗದಲ್ಲಿ (ಕ್ರಿ. ಶ. 1017 ಜನನ, 120 ವರ್ಷ ಜೀವಿತ) ಜೀವಿಸಿದ್ದ ರಾಮಾನುಜರು ಆಚಾರ್ಯ ಸಂಪ್ರದಾಯದಲ್ಲೇ ಪ್ರಮುಖ ಅವರು ಜಾತಿ ಮತ್ತು ಅಂತಸ್ತುಗಳ ಎಲ್ಲೆಯನ್ನು ಮೀರಿ ಬ್ರಾಹ್ಮಣೇತರರಾದವರನ್ನು (ಪಿಳ್ಳೈಉರುಂಗಾವಿಲ್ಲದಾಸ) ತಮ್ಮ ಶಿಷ್ಯರನ್ನಾಗಿ ಹೊಂದಿದಂತವರು. ಅವರಿಗೆ ನಾಮಧಾರಣೆ ಮಾಡುವುದಕ್ಕೂ ತಮ್ಮ ಆಚಾರ–ವ್ಯವಹಾರಗಳನ್ನು ಅನುಕರಣ ಮಾಡುವುದಕ್ಕೂ ಅವಕಾಶವನ್ನು ಕಲ್ಪಿಸಿ ವೈಷ್ಣವ ಪ್ರಪಂಚದಲ್ಲಿ ಅವರಿಗೆ ಒಂದು ಯೋಗ್ಯ ಸ್ಥಾನಾವಕಾಶ ಕಲ್ಪಿಸಿದವರು. ಇಂತಹ ಸಂದರ್ಭದಲ್ಲಿ ಚೋಳ ಚಕ್ರವರ್ತಿಯಾದ 1ನೇ ಕುಲೋತ್ತುಂಗ ಚೋಳನು ವೈಷ್ಣವ ಮತಕ್ಕೆ ಕಿರುಕುಳ ಕೊಡಲು ಆರಂಭಿಸಿದಾಗ, ಮೈಸೂರು ಪ್ರಾಂತ್ಯಕ್ಕೆ ಬಂದು ಮೇಲುಕೋಟೆ ಯಲ್ಲಿ ನೆಲೆಸಬೇಕಾಯಿತು. ಹಳೇಬೀಡಿನಿಂದ ಆಳ್ವಿಕೆ ನಡೆಸುತ್ತಿದ್ದ ಜೈನ ಸಂಪ್ರದಾಯಸ್ಥ ಬಿಟ್ಟಿದೇವನು ಇವರ ತತ್ವಗಳಿಂದ ಪ್ರಭಾವಿತಗೊಂಡು ವಿಷ್ಣುವರ್ಧನನಾದುದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ. ಆದರೆ ಇತ್ತೀಚೆಗೆ ವಿದ್ವಾಂಸರು ಇದನ್ನು ಪ್ರಶ್ನಿಸಿದ್ದು ಮತಾಂತರಗೊಂಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ (ಸಂ). ಈ ಸಂದರ್ಭದಲ್ಲಿ ರಾಮಾನುಜರು ಕರ್ನಾಟಕ ದಾದ್ಯಂತ ಸಂಚರಿಸಿದರೆಂಬ ನಂಬಿಕೆಯೂ ಇದೆ.

ಹಾಗಾಗಿ ಕರ್ನಾಟಕದ ಮೇಲುಕೋಟೆಯನ್ನು ಒಳಗೊಂಡಂತೆ ಶ್ರೀರಂಗ ಪಟ್ಟಣ, ಬೇಲೂರು, ಚಿಕ್ಕಬಳ್ಳಾಪುರ ಬಳಿಯ ರಂಗಸ್ಥಳ ಮುಳಬಾಗಿಲಿನ ರಂಗನಾಥ, ದೇವರಾಯನ ದುರ್ಗದ ರಂಗನಾಥ, ಗದುಗಿನ ವೀರನಾರಾಯಣ ಹಾಗೂ ಇನ್ನಿತರ ದೇವಾಲಯಗಳಲ್ಲಿ ಶ್ರೀ ರಾಮಾನುಜರ ಮೂರ್ತಿಗಳು ಹಾಗೂ

ಅರೆ ಆರರ ಮೂರ್ತಿಗಳು ಸ್ಥಾಪನೆಗೊಂಡಂತೆ

ಹೀಗೆ ರಾಮಾನುಜಾಚಾರ್ಯರ ಪ್ರಭಾವದಿಂದ ನಿರ್ಮಾಗೊಂಡ ಬಹುತೇಕ ವೈಷ್ಣವ ದೇವಾಲಯಗಳಲ್ಲಿ ಅವರು ಕರ್ನಾಟಕಕ್ಕೆ ಬಂದ ನಂತರದ ದಿನಗಳಲ್ಲಿ ಅದರ ಶಿಲ್ಪಗಳು ಸೇರ್ಪಡೆಗೊಂಡವು. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪರಿಸರದಲ್ಲಿ ಹೊಸದುರ್ಗ ತಾಲೂಕಿನ ಬಾಗೂರಿನ ಶ್ರೀ ಚನ್ನಕೇಶವ ದೇವಾಲಯ, ಗವಿರಂಗನಾಥ ಇಮಿ ದೇವಾಲಯ, ದಾವಣಗೆರೆ ತಾಲ್ಲೂಕಿನ ನೀರ್ಥದ ರಂಕಟರಮಣ ಹಾಗೂ ಬೆಟ್ಟದ ಮೇಲಿನ ಗೋಪಾಲಸ್ವಾಮಿ ರಂಗನಾಥ ಸ್ವಾಮಿ ದೇವಾಲಯ, ಚಿತ್ರದುರ್ಗ ನಗರದ ದೇವಾಲಯಗಳಲ್ಲಿ ಆಳ್ವಾರರ ಶಿಲ್ಪಗಳಿರುವುದನ್ನು ನೋಡುತ್ತೇವೆ.

ಶ್ರೀ ವೈಷ್ಣವ ಆಳ್ವಾರರ ಶಿಲ್ಪಗಳು ಶೈವ, ವೈಷ್ಣವ ಹಾಗೂ ಇನ್ನಿತರೆ ಸಾಮಾನ್ಯ ಶಿಲ್ಪಗಳಿಗಿಂತಲೂ ತುಸು ಭಿನ್ನವೆನಿಸುತ್ತವೆ. ಶೈವ ಶಿಲ್ಪಗಳಲ್ಲಿ ಕಂಡುಬರುವಂತೆ ತ್ರಿಶೂಲ, ಢಮರು, ನಂದಿ ಅಥವಾ ಇನ್ನಿತರ ಯಾವುದೇ ಲಕ್ಷಣಗಳಾಗಲೀ, ವೈಷ್ಣವ ಶಿಲ್ಪಗಳಲ್ಲಿರುವಂತೆ ಶಂಕ, ಚಕ್ರ, ಗಧಾ, ಗರುಡಾ ಅಥವಾ ಇನ್ನಿತರ ಯಾವುದೇ ಚಿಹ್ನೆಗಳಾಗಲೀ ಶ್ರೀ ವೈಷ್ಣವ ಆಳ್ವಾರರ ಶಿಲ್ಪಗಳಲ್ಲಿ ಕಂಡುಬರುವುದಿಲ್ಲ. ಈ ಶಿಲ್ಪಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳನ್ನು ಈ ಮುಂದಿನಂತೆ ನೋಡಬಹುದು.

- ಯಾವುದೇ ರೀತಿಯ ಆಯುಧಗಳನ್ನುಹೊಂದಿರದೆ, ಸರಳಶಿಲ್ಪಗಳಾಗಿರುತ್ತವೆ.
- ಬಹುತೇಕಶಿಲ್ಪಗಳು ಆಸೀನಭಂಗಿಯಲ್ಲಿದ್ದು, ಅರ್ಧಪದ್ಮಾಸನದಲ್ಲಿರುತ್ತವೆ.
- ತಲೆಯ ಕೂದಲನ್ನು ಹಿಂಬದಿಯಲ್ಲಿ ತುರುಬಿನಂತೆ ಕಟ್ಟಲಾಗಿರುತ್ತದೆ.
- ಒಂದು ರೀತಿಯಬಟ್ಟೆಯಿಂದ ಅಥವಾಹತ್ತಿಯಿಂದ ತಯಾರಿಸಿದಸ್ವಲ್ಪ ದಪ್ಪನೆಯ ಕೊರಳಸರ, ಜನಿವಾರ, ಕರ್ಣಕುಂಡಲಗಳು ಇತ್ಯಾದಿಸರಳ ಅಲಂಕಾರಿಕ ಅಂಶಗಳು ಕಂಡುಬರುತ್ತವೆ.
- ಹಣೆಯಮೇಲ್ಭಾಗದಲ್ಲಿ ಇಂಗ್ಲೀಷಿನ ಗ ಅಥವಾ ಗಿ ಆಕಾರದ ಮೂರು ಗೆರೆಯ ನಾಮದ ಅಲಂಕಾರ ವಿರುತ್ತದೆ.
- ಬಹುತೇಕಶಿಲ್ಪಗಳು ಅಂಜಲಿಮುದ್ರೆಯಲ್ಲಿರುತ್ತವೆ. ಪೋಯ್‌ಗೈ ಆಳ್ವಾರ್: ಆಳ್ವಾರ್‌ಸಂಪ್ರದಾಯದಲ್ಲಿ ಕಂಡುಬರುವಮೊದಲ ಆಳ್ವಾರರಿವರು.

ಇವರ ಹುಟ್ಟಿನ ಹಿನ್ನೆಲೆ ಹಾಗೂ ಕುಲಗೋಕೆಗಳು ತಿಳಿದುಬರುವುದಿಲ್ಲ ಚಿಕ್ಕಮಗುವೊಂದು ತಾವರೆ ಹೂವಿನ ಮೇಲೆ ಇದ್ದದ್ದು ಕಂಡ ದಂಪತಿಗಳು ಅದನ್ನು ತಂದು ಸಾಕಿರುತ್ತಾರೆ, ಹಾಗಾಗಿ ಇವರಿಗೆ ಪೋಯ್, ಆಳ್ವಾಎನ್ನುವ ಹೆಸರು ಬಂದಿದೆ. ಇವರ ಉಲಮಾನದ ಬಗ್ಗೆಯೂ ಗೊಂದಲಗಳಿದ್ದು, ಕಾರು ನಾಲ್ಕನೇ ಶತಮಾನದ ಆದಿಭಾಗವೆಂದರೆ, ಮತ್ತೆ ಕೆಲವರು ಈ ಏಳನೇ ಶತಮಾನದ ಆದಿಭಾಗ ಎಂದು ಹೇಳದರು, ಇವರು ಈ ದೇವಮುತ್ತರೂ, ದೈವ ಮುಗ್ಧರೂ ಆಗಿ ಒತ್ತುವನ್ನು ಕುರಿತು – ಸ್ತೋತ್ರಗಳನ್ನು ಹಾಡುತ್ತಾ ತಮಿಳುನಾಡಿನಾದ್ಯಂತ ತಿರುಗಿದರು. ಹಾಗಾಗಿ ಇವರನ್ನು ಕೆಲವರು ಹುಚ್ಚರೆಂದು ಕರೆಯುವರು, ಇವರು ರಚಿಸಿದ ಪಬಂಧಕ್ಕೆ ತಿರುವಂದಾದಿ' ಎಂದು ಕತ್ತಲು, ಇದರಲ್ಲಿ ನೂರಾರು ಬಿಡಿ ಪದ್ಯಗಳಿವೆ.

**ಪೊದತ್ತಾಳ್ವಾರ್:** ಇವರು ಪೋಗೆ ಆಳ್ವಾಸಮಕಾಲೀನರು ಹಾಗೂ ಅದೇ ರೀತಿಯ ತತ್ವ ಸಿದ್ಧಾಂತ ಗಳನ್ನು ತಮ್ಮನ್ನು ತೊಡಗಿಸಿಕೊಂಡವರು. ಇವರ ತತ್ವಗಳುಳ್ಳ ಪ್ರಬಂಧಕ್ಕೆ 'ಎರಡನೆಯ ತಿರುವಂದಾದಿ' ಎಂದು ಕರೆಯ ಲಾಗುತ್ತದೆ. ಇದರಲ್ಲಿ ನೂರಾರು ಬಿಡಿ ಪದ್ಯಗಳಿವೆ. ಪೋ ಆಳ್ವಾರ್ ಹಾಗೂ ಪೊದಾತ್ತಾಳ್ವಾರರಂತೆಯೇ ಪೇಯಾಳ್ವಾ?ರ ಜನನದ ಕುರಿತು ಹೆಚ್ಚಿನ ಮಾಹಿತಿಗಳು ದೊರೆಯುವುದಿಲ್ಲ. ಇವರೂ ಸಹ ವಿಷ್ಣುವಿನ ಮಹಾನ್ ಭಕ್ತರಾಗಿದ್ದು, ವೈಷ್ಣವ – ಧರ್ಮವನ್ನು ಪ್ರಚರಪಡಿಸಿದ ಅಗ್ರಗಣ್ಯರಲ್ಲೊಬ್ಬರು. ಇವರು ರಚಿಸಿದ ಪ್ರಬಂಧಕ್ಕೆ 'ಮೂರನೆಯ ತಿರುವಂದಾದಿ' ಎಂದು ಕರೆಯಲಾಗುತ್ತಿದ್ದು, ಅದರಲ್ಲಿ ನೂರಾರು ಬಿಡಿ ಪದ್ಯಗಳಿವೆ.

**ತಿರುಮಳಿಶೈಆಳ್ವಾರ್:** ತಿರುವಾಳನ್ ಮತ್ತು ಪಂಗಯ ಚಲ್ವಿಯಾರ್ ಎನ್ನುವ ಬೇಡ ಜನಾಂಗದ ಕುಟುಂಬದಲ್ಲಿ ಸಾಕುಮಗನಾಗಿ ಬೆಳೆದ ಈತನ ಹಿನ್ನೆಲೆಯ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬರುವುದಿಲ್ಲ. ವೈಷ್ಣವ ಭಕ್ತರಲ್ಲೇ ಈತ ಏಕಾಂತಿ, ವಿಷ್ಣುವನ್ನಲ್ಲದೆ ಇನ್ಯಾವುದೇ ದೇವರನ್ನೂ ಪೂಜಿಸ ದವರು. ಹಾಗಾಗಿ ಇವರಿಗೆ 'ಭಕ್ತಿಸಾರ' ಎನ್ನುವ ಬಿರುದಿ ನಿಂದಲೂ ಕರೆಯಲಾಗುತ್ತದೆ. 120 ಬಿಡಿ ಪದ್ಯಗಳಿಂದ ಕೂಡಿದ 'ತಿರುಚ್ಚಂದವಿರುತ್ತಂ' ಹಾಗೂ 96 ಪದ್ಯಗಳಿಂದ ಕೂಡಿದ 'ನಾನ್‌ಮುಹನ್' ಎನ್ನುವ ಎರಡು ಬೃಹತ್ ಪ್ರಬಂಧಗಳನ್ನು ಇವರು ರಚಿಸಿರುವರು.

**ನಮ್ಮಾಳ್ವಾರ್:** ವೈಷ್ಣವ ಸಂತರಲ್ಲೇ ಅಗ್ರಗಣ್ಯರು. ಇವರನ್ನು ಶಠಾರಿ, ಶಡಗೋಪನ್ ಇತ್ಯಾದಿ ಹೆಸರು ಗಳಿಂದಲೂ ಕರೆಯಲಾಗುತ್ತದೆ. ವೆಲ್ಲಾಳಕುಲದ ಕಾರಿಯಹಾಗೂ ಉಡೈಯ ನಂಗೈಯಾರ್ ದಂಪತಿಗಳಿಗೆ ತಿರುಕ್ಕುರು ಹೂರ್‌ನಲ್ಲಿ ಜನಿಸಿದ ಇವರು 6ನೇ ಶತಮಾನದ ಅಥವಾ 8ನೇ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದರೆಂದು ಹೇಳಲಾಗುತ್ತದೆ, ಇವರು ಚಿಕ್ಕಮಗುವಾಗಿದ್ದಾಗಿನಿಂದಲೂ ಅಳುತ್ತಿರಲೂ ಇಲ್ಲ ಹಾಗೂ ಹೊಟ್ಟೆಗೆ ಏನನ್ನೂ ಸೇವಿಸು ತಿರಲಿಲ್ಲವಂತೆ, ಹಾಗಾಗಿ ಇವರ ತಂದೆ–ತಾಯಿಗಳು ಚಿಂತಾಕ್ರಾಂತರಾಗಿ ಏನುಮಾಡಬೇಕೆಂದು ತೋಚದ ಕೊನೆಗೊಂದು ದಿನ ಊರಹತ್ತಿರವಿದ್ದ ಹೊಳೆಯ ದಂಡೆಯ ಮೇಲಿದ್ದ ಗುಡಿಯಲ್ಲಿ ತೊಟ್ಟಿಲು ಹಾಕಿ ಅದರಲ್ಲಿ ಈ ಕೂಸನ್ನು ಮಲಗಿಸಿ ಬಂದರು. ಹೀಗೆ ಅನಾಥವಾಗಿ ಬೆಳೆದ ಮಗು ತನ್ನ ಹದಿಮೂರನೇ ವಯಸ್ಸಿನಲ್ಲಿ ಮಧುರಕವಿಯ ಶಿಷ್ಯರಾದರು. ಮುಂದೆ ವೈಷ್ಣವ ಧರ್ಮ ಪ್ರಚಾರದಲ್ಲಿ ತೊಡಗಿದ ಇವರು ನಾಲ್ಕು ಕೃತಿಗಳನ್ನು ರಚಿಸಿದರು. ಅವುಗಳೆಂದರೆ, 'ತಿರುವಿರುತ್ತಂ' (100 ಬಿಡಿ ಪದ್ಯಗಳು), 'ತಿರುವಾಶಿರಿಯಂ' (ಪಿ ಪದ್ಯಗಳು), 'ಪೆರಿಯ ತಿರುವಂದಾದಿ' (82 ಪದ್ಯಗಳು) ಹಾಗೂ 'ತಿರುವಾಯ್‌ಮೊಳಿ" (1102 ಪದ್ಯಗಳು) ಶ್ರೀ ವೈಷ್ಣವ ಆಳ್ವಾರರು ಇವುಗಳನ್ನು ತಮಿಳಿನ ನಾಲ್ಕು ವೇದಗಳೆಂದೇ ಭಾವಿಸಿದ್ದಾರೆ. ವೇದಾಂತ ದೇಶಿಕರು ತಿರುವಾಯ್ ಮೊಳೆಯನ್ನು 'ಮಿಡೋಪನಿಷತ್ತೆಂದು' ಕರೆದಿದ್ದಾರೆ. ಇವರ ಕೃತಿಗಳು ಸರಳವಾಗಿದ್ದು, ನೈತಿಕ ಹಾಗೂ ಅಧ್ಯಾತ್ಮಿಕ ಮೌಲ್ಯಗಳಿಂದ ಕೂಡಿವೆ.

**ಮಧುರ ಕವಿ:** ನಮ್ಮಾಳ್ವರರಿಗಿಂತ ವಯಸ್ಸಿನಲ್ಲಿ ಹಿರಿಯರಾಗಿದ್ದು, ಅವರ ಸಮಕಾಲೀನರು. ಇವರು ಬ್ರಾಹ್ಮಣ ಕುಲದಲ್ಲಿ ಜನಸಿದ್ದರೂ, ಕೀಳು ಜಾತಿಯ ಅನೇಕ ಶಿಷ್ಯರನ್ನು ಹೊಂದಿ, ಅವರಲ್ಲಿ ಶ್ರೀ ವೈಷ್ಣವನನ್ನು ಕಂಡವರು. ಒಮ್ಮೆ ಇವರು ಅಯೋಧ್ಯೆಯಲ್ಲಿ

ಧಾರ್ಮಿಕ ಪ್ರವಾಸವಿದ್ದಾಗ ಬಾನಲ್ಲಿ ಜ್ಯೋತಿಯೊಂದನ್ನು ಕಂಡು ಅಶರೀರವಾಣಿಯಿಂದ ಸಂದೇಶ ಪಡೆದು ತಮಿಳುನಾಡಿಗೆ ಬಂದರು. ತಿರುಕುರುಹೋರ್‌ನಲ್ಲಿ ಅನಾಥವಾಗಿ ಬೆಳೆಯುತ್ತಿದ್ದ ಮಾರನ್ ಎಂಬ ಹೆಸರಿನ ಬಾಲಯೋಗಿಯನ್ನು ಕಂಡು ಅವರನ್ನು ಶಿಷ್ಯರನ್ನಾಗಿ ಪಡೆದು ಅವರಲ್ಲಿ ಜ್ಞಾನವನ್ನು ತುಂಬಿದರು.

**ಕುಲಶೇಖರ ಆಳ್ವಾರ್:** ಇವರು ಕೇರಳದ ಮಲಬಾರ್‌ನ ರಾಜಮನೆತನದಲ್ಲಿ ಜನಿಸಿದವರೂ, ಇವರಿಗೆ ಭೋಗದ ಆಸೆಯಿರಲಿಲ್ಲ. ಇವರಲ್ಲಿ ಅಧಿಕಾರದ ಆಸೆಗಿಂತ ಆಧ್ಯಾತ್ಮಕತೆ ಯೆಡೆಗೆ ಹೆಚ್ಚು ಒಲವಿತ್ತು. ತೀರ್ಥಯಾತ್ರೆಗಳಲ್ಲಿ ವಿಶೇಷವಾದ ಆಸಕ್ತಿಯಿತ್ತು. ಹಾಗಾಗಿ ರಾಜತ್ವವನ್ನು ತೊರೆದು ವೈಷ್ಣವ ದೀಕ್ಷೆಯನ್ನು ಪಡೆದು ಶ್ರೀವೈಷ್ಣವ ಸಂತರಾದರು. ಅಂತಿಮವಾಗಿ 105 ಪದ್ಯಗಳಿಂದ ಕೂಡಿದ ತಿರುಮೊಳಿ ಎನ್ನುವ ಕೃತಿಯನ್ನು ರಚಿಸಿದರು.

**ಪೆರಿಯಾಳ್ವಾರ್:** ಮುಕುಂದಾಚಾರ್ಯಹಾಗೂ ಪದುಮೈಯಎನ್ನುವ ದಂಪತಿಗೆ ಜನಿಸಿದ ಇವರ ಮೂಲ ಹೆಸರು ವಿಷ್ಣು ಚಿತ್ತ. ಇವರು ಪಾಂಡ್ಯರಾಜನ ಆಸ್ಥಾನದಲ್ಲಿ ವಾಕ್ಯಾರ್ಥವಾದದಲ್ಲಿ ಪರವಾದಿಗಳನ್ನು ಗೆದ್ದು, ರಾಜನನ್ನೇ ವೈಷ್ಣವರನ್ನಾಗಿಸಿದರೆನ್ನಲಾಗಿದೆ. ಇವರು 'ತಿರುಪ್ಪಲ್ಲಾಂಡು' ಎಂಬ ಕೃತಿಯನ್ನು ರಚಿಸಿದ್ದು ಅದರಲ್ಲಿ ಶ್ರೀ ವೈಷ್ಣವರು ಪೂಜಾಧಿಕಾಲದಲ್ಲಿ ಅನುಸರಿಸಬೇಕಾದ ವಿವರಣೆಗಳನ್ನು ನೀಡುವ 12 ಪದ್ಯಗಳಿವೆ.

**ಅಂಡಾಳ್:** ಶ್ರೀ ವೈಷ್ಣವ ಆಳ್ವಾರರುಗಳಲ್ಲಿ ಏಕಮಾತ ಸ್ತ್ರೀಯೂ, ಸುಪ್ರಸಿದ್ಧಳೂ ಆದ ಗೋದಾದೇವಿ ಅಥವಾ ಅಂಡಾಳ್ ಎನ್ನುವವಳು ಪೆರಿಯಾಳರವರ ಸಾಕುಮಗಳು. ಪೆರಿಯಾಳ್ವಾರಿಗೆ ಒಂದು ದಿನ ತಮ್ಮ ತೋಟದ ತುಳಸೀ ವನದಲ್ಲಿ ಒಂದು ಅನಾಥ ಹೆಣ್ಣು ಶಿಶು ದೊರೆಯಿತು. ಅದಕ್ಕೆ ಅವರು ಗೋದಾದೇವಿ ಎಂದು ನಾಮಕರಣಮಾಡಿ ತಾವೇ ಸಾಕಿದರು. ಮುಂದೆ ಗೋದಾದೇವಿಯು ತನ್ನಲ್ಲಿದ್ದ ಭಕ್ತಿಯ ಮೂಲಕ ಶ್ರೀ ರಂಗನಾಥನನ್ನೇ ಪತಿಯಾಗಿ ವರಿಸಿ ಸ್ಥಳೀಯ ರಂಗನಾಥ ದೇವಾಲಯದಲ್ಲಿ ಭಗವಂತನ ಕೈಂಕರ್ಯ ದಲ್ಲಿಯೇ ಮಗ್ನಳಾದಳು. ಹೀಗೆ ಶ್ರೀರಂಗನಾಥನ ಸೇವೆ ಯಲ್ಲೇ ತನ್ನನ್ನು ತೊಡಗಿಸಿಕೊಂಡು 12 ಪದ್ಯಗಳಿಂದ ಕೂಡಿದ 'ತಿರುಪ್ಪಾವೈ' ಹಾಗೂ 142 ಪದ್ಯಗಳಿಂದ ಕೂಡಿದ 'ನಾಚ್ಚಿಯಾರ್ ತಿರುಮೊಳಿ' ಎನ್ನುವ ಎರಡು ಪ್ರಬಂಧಗಳನ್ನು ರಚಿಸಿದಳು. ಇವುಗಳು ಇಂದಿಗೂ ಸಹ ತಮಿಳು ಸಾಹಿತ್ಯದಲ್ಲಿ ಉಪನಿಷತ್ಸಾರಗಳೆಂದೇ ಖ್ಯಾತಿಗಳಿಸಿವೆ. ಸಾಮಾನ್ಯವಾಗಿ ವೈಷ್ಣವರು ಇಂದಿಗೂ ತಮ್ಮ ಪೂಜೆಯ ಸಂದರ್ಭದಲ್ಲಿ 'ತಿರುಪ್ಪಾವೈ'ಯ ಕೊನೆಯೆರಡು ಪದ್ಯಗಳನ್ನು ಹಾಡುವರು.

**ತೊಂಡರಪ್ಪೋಡಿ ಆಳ್ವಾರ್:** ಇವರ ಮೂಲ ಹೆಸರು ವಿಪ್ರನಾರಾಯಣ. ಇವರು ಸಂಪ್ರದಾಯಬದ್ಧ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರೂ ವೇಶ್ಯಯ ಸಹವಾಸ ಮಾಡಿ ಜೀವನದಲ್ಲಿ ಜಿಗುಪ್ಸೆ ಹೊಂದಿದರು. ಕೊನೆಗೆ ದೈವಕೃಪೆಯಿಂದ ಜ್ಞಾನವನ್ನು ಪಡೆದು ಅಂತಿಮವಾಗಿ ಶ್ರೀರಂಗನಾಥನ ಆರಾಧಕರಾದರು. ಭಗವಂತನ ಕಾರುಣ್ಯದಿಂದ ಪರಮ ಪಾಪಿಯ ಪರಮೋತ್ತಮವಾದ ಮೋಕ್ಷಸಾಮ್ರಾಜ್ಯವನ್ನು ಪಡೆಯಲು ಸಾಧ್ಯ ಎನ್ನುವುದನ್ನು ಈತನ ಹಿನ್ನೆಲೆ ತಿಳಿಸುತ್ತದೆ. 45 ಪದ್ಯಗಳಿಂದ ಕೂಡಿದ 'ತಿರುಮಾಲೈ' ಹಾಗೂ 10 ಪದ್ಯಗಳಿಂದ ಕೂಡಿದ 'ತಿರುಪಳ್ಳಿಎಳಿಚ್ಚಿ' ಎಂಬ ಸುಪ್ರಭಾತ ಗೀತೆಯನ್ನು ರಚಿಸಿರುವರು. ಶ್ರೀ ವೈಷ್ಣವ ಮಹಿಳೆಯರು ಇಂದೂ ಸಹ ಪ್ರತಿನಿತ್ಯ ಬೆಳಗಿನ ಪೂಜಾ ಸಂದರ್ಭದಲ್ಲಿ ಇವರ ಗೀತೆಗಳನ್ನು ಹಾಡುವರು.

**ತಿರುಪ್ಪಾಣಾಳ್ವಾರ್:** ಪ್ರಾಚೀನ ಸಮಾಜದ ಅತ್ಯಂತ ಕಟ್ಟಕಡೆಯ ಜಾತಿಯಾದ ಪಂಚಮರಲ್ಲಿ ಜನಿಸಿದ ಇವರ ಹಿನ್ನೆಲೆಯ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ. ಕಾವೇರಿ ತೀರದ ಉರೈಯೂರು ಇವರ ಜನ್ಮಸ್ಥಳ.
ಹೀಗಿರುವಾಗ, ಲೋಕಸಾರಂಗ ಮುನಿ ಂದ ಇನಾಥ ದೇವಾಲಯದ ಎದುರಿಗೆ ಒಂದು ಗುಡಿಸಲಿನಲ್ಲಿ ಎನ್ನುವರಿಗೆ ಶ್ರೀರಂಗನಾಥನು ಸ್ವಪ್ನದಲ್ಲಿ ಬಂದು ಈ ಅಳ್ವಾರವನ್ನು ನಿನ್ನ ಹೆಗಲಿನ ಮೇಲೆ ಕೂಡಿಸಿಕೊಂಡು ಭರ್ಗುಡಿಯೊಳಗೆ ಬಾ ಎಂದು ಹೇಳಿದಂತೆ ಭಾಸವಾಗಲು ಅದರಂತೆ, ಮುನಿಯು ಇವರನ್ನು ಗರ್ಭಗುಡಿಯೊಳಗೆ ಪ್ರತೀತಿಯಿದೆ. ಇವರು 10 ಪದ್ಯಗಳುಳ್ಳ 'ಅಮಲ ಎತ್ತುತಂದಾಗ ಶ್ರೀರಂಗನಾಥನಲ್ಲೇ ಲೀನವಾದರೆನ್ನುವ ಎನ್ನುವ ಕೃತಿಯನ್ನು ರಚಿಸಿರುವರು.

**ತಿರುಮಂಗೈ ಆಳ್ವಾರ್:** ಹನ್ನೆರಡು ಆಳ್ವಾರರುಗಳಲ್ಲಿ ಕೊನಯವರು, ಚೋಳರಾಜನ ದಂಡನಾಯಕ ನೀಲ ಎನ್ನುವ ವಾಳ ಜಾತಿಯ ಕಳ್ಳಕುಲದವರ ಮಗನಾಗಿ ಜನಿಸಿದರು. ಚಿಕ್ಕಂದಿನಿಂದಲೇ ತುಂಬ ಧೈರ್ಯಶಾಲಿಯಾದ ಇವರು ಮುಂದೆ ತಂದೆಯಂತೆ ದಂಡನಾಯಕನಾಗಿ 'ಪರಕಾಲನ್' ಎಂಬ ಬಿರುದನ್ನು ಪಡೆದರು. ಕುಮುದವಲ್ಲಿ ಎನ್ನುವ ವಿಷ್ಣುಭಕ್ತೆಯಾದ ತಮ್ಮ ಪತ್ನಿಯ ಪ್ರಭಾವದಿಂದ ತಾವು ವೈಷ್ಣವರಾಗಿ ನಾಗಪಟ್ಟಣದ ಬೌದ್ಧದೇವಾಲಯಗಳನ್ನು ಕೊಳ್ಳಹೊಡೆದು ಶ್ರೀರಂಗ ದೇವಾಲಯ ನಿರ್ಮಾಣದಲ್ಲಿ ತೊಡಗಿದರು. ಗುರಿ ಉತ್ತಮವಾದರೆ, ಮಾರ್ಗವು ಷ್ಟವಾದರೂ ಬಾಧಕವಿಲ್ಲವೆಂಬ ಅಂಶವನ್ನು ತಿರುಮಂಗೈ ಆಳ್ವಾರರ ಚರಿತ್ರೆಯ ತಿಳಿಸುತ್ತದೆ. ಪೆರಿಯಾ ತಿರುಮೊಲಿ (1084 ಪದ್ಯಗಳು), ತಿರುಕ್ಕುರುದ್ಧಾಂಡಹಂ (20 ಪದ್ಯಗಳು), ತಿರುನೆಡುಸ್ಥಾಂಡಹಂ (20 ಪದ್ಯಗಳು), ಶಿರಿಯ ತಿರುಮಡಲ್ (22 ಪದ್ಯಗಳು), ಪೆರಿಯ ತಿರುಮಡಲ್ (148 ಪದ್ಯಗಳು), ತಿರುವಳುಕ್ಕೊತ್ತಿರಕ್ಕೈ (02 ಪದ್ಯಗಳು), ಹೀಗೆ ತಿರುಮಂಗೈ ಆಳ್ವಾರ್‌ರವರು 1361 ಪದ್ಯಗಳಿಂದ ಕೂಡಿದ 6 ಕೃತಿಗಳನ್ನು ರಚಿಸಿರುವರು. ಇವರ ಕೃತಿಗಳಲ್ಲಿ
ಸಾಮಾನ್ಯವಾಗಿ ದೇವರು ಹಾಗೂ ಭಕ್ತರ ನಡುವಿನ ಸಂಬಂಧಗಳ ಕುರಿತು ವಿವರಣೆಗಳಿರುವುದನ್ನು ನೋಡುತ್ತೇವೆ.
ಕ್ರಿ.ಶ.3–4ನೇ ಶತಮಾನದಿಂದ ಕ್ರಿ.ಶ. 7–8ನೇ ಶತಮಾನದ ಅವಧಿಯಲ್ಲಿ ಜೀವಿಸಿದ್ದ ಶ್ರೀ ವೈಷ್ಣವ ಆಳ್ವಾರರು ಯಾವುದೇ ಒಂದು ಜಾತಿ ಅಥವಾ ವರ್ಗಕ್ಕೆ ಸೇರಿರದೆ, ಎಲ್ಲಾ ಜಾತಿ ಹಾಗೂ ವರ್ಗಕ್ಕೆ ಸೇರಿದವರಾಗಿದ್ದಾರೆ. ಬಹುತೇಕ ಇವರು ಸಮಾಜದ ಕೆಳವರ್ಗದಿಂದಲೇ ಬಂದಿದ್ದಾರೆ ಎಂದರೆ ತಪ್ಪಾಗಲಾರದು. ಆಧ್ಯಾತ್ಮಿಕವಾಗಿರುವು ದಕ್ಕಿಂತ ಅನುಭಾವಿಕವಾಗಿರುವುದು ಈ ಪರಂಪರೆಯ ಪ್ರಮುಖ ವೈಶಿಷ್ಟ್ಯ ಎಂದು ಹೇಳಬಹುದು. ಐಹಿಕ ಭೋಗಗಳ ಕ್ಷಣಿಕತ್ವವನ್ನು ಅರಿತು ಭಗವಂತನ ಇಚ್ಛೆಯಂತೆ ಸಂಸಾರದಿಂದ ಬಿಡುಗಡೆ ಪಡೆದ ವೈಷ್ಣವ ಭಕ್ತರಿವರು. ಇವರು ಭಗವಂತನನ್ನು ನಾರಾಯಣನೆಂದೂ, ಅವನೇ ಈ ಸೃಷ್ಟಿಯ ಕಾರಣ ಕತೃವೆಂದೂ ಹೇಳಿದರು. ಅವನು ಸರ್ವ ವ್ಯಾಪಿಯಾಗಿದ್ದು, ಜ್ಞಾನ ಪ್ರೇಮಗಳ ನಿಧಿ, ಅದೇ ಪ್ರೇಮದ ಫಲವಾಗಿಯೇ ಅವನು ಪ್ರತಿಯೊಂದು ಜೀವಿಗೂ ತಂದೆ–ತಾಯಿ, ಆತ್ಮ ನಾನು, ನನ್ನದು ಎನ್ನುವ ಭಾವನೆ ಮೊದಲು ನಿವಾರಣೆಯಾಗಬೇಕು. ಭಗವಂತನಲ್ಲಿ ಸಂಪೂರ್ಣವಾಗಿ ತನ್ನನ್ನು ಲೀನಗೊಳಿಸ ಬೇಕೆಂದು, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಭಗವಂತ ನಿಗಾಗಿ ಸೇವೆಸಲ್ಲಿಸಬೇಕು. ಈ

ದೇಹವು ಅವನ ಕಾರುಣ್ಯ ದಿಂದಲೇ ಬಂದಿರುವುದರಿಂದ ಅವನಿಗಾಗಿ ಈ ದೇಹವನ್ನು ಅರ್ಪಿಸಬೇಕು ಎಂದು ಮುಂತಾಗಿ ಭಗವಂತನನ್ನು ಒಲಿಸಿ ಕೊಳ್ಳುವ ಬಗೆಯನ್ನು ಅದರ ಮಹತ್ವವನ್ನು ತಮ್ಮ ಕೃತಿಗಳ ಮೂಲಕ ತತ್ವಗಳ ಮೂಲಕ ತಿಳಿಸಿದ್ದಾರೆ.

## ರೆಫೆರೆನ್ಸ್ಸ್


1. ಕ್ಷೇತ್ರ ಕಾರ್ಯಾಧಾರಿತ ಮಾಹಿತಿ,
2. ನಂದಿಮಠ ಎಸ್.ಸಿ.,ಕರ್ನಾಟಕದ ಧರ್ಮಗಳು: ಕನ್ನಡನಾಡಿನ ಚರಿತ್ರೆ, ಭಾಗ 2,ಬೆಂಗಳೂರು,1974.
3. ಪುಟ್ಟಪ್ಪ ಕೆ.ವಿ., (ಪ್ರ, ಸಂ.)– ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂ–01, ಮೈಸೂರು, 1970.
4. ಶೇಷನವರತ ಜಾಗತಿಕ ಧರ್ಮಗಳು, ಸಮಾಜ ಪುಸ್ತಕಾಲಯ, ಧಾರವಾಡ–1998
5. ಶ್ರೀಕಂಠಶಾಸ್ತ್ರಿ – ಎಸ್. – ಭಾರತೀಯ ಸಂಸ್ಕೃತಿ, ಬೆಂಗಳೂರು–1975
6. ಹರಿದಾಸ ಭಟ್ಟಾಚಾರ್ಯ (ಸಂ.), ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂ–14, ಮೈಸೂರು–1988.
7. ವಿಷಯ ವಿಶ್ವಕೋಶ.